**ಸಾಕ್ಷಿಯು ದಿಃ 23.02.2026 ರಂದು ನ್ಯಾಯಾಲಯದಲ್ಲಿ ಹಾಜರಿದ್ದು ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲು: ಪ್ರತಿವಾದಿಗಳ ಪರ ವಕೀಲರಿಂದ**

ವಾದಿಯು ಏಕೆ ದಾವಾ ದಾಖಲಿಸಿದ್ದಾರೆಂದು ನನಗೆ ಗೊತ್ತಿಲ್ಲ. ವಾದಿಯು ದಾವಾ ದಾಖಲಿಸುವ ಮೊದಲು ತಹಸೀಲ್ದಾರ್ ನ್ಯಾಯಾಲಯ, ಉಪ ವಿಭಾಗಾಧಿಕಾರಿಗಳ ನ್ಯಾಯಾಲಯ ಮತ್ತು ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿದ್ದ ವಿಚಾರ ಗೊತ್ತು. ಸದರಿ ನ್ಯಾಯಾಲಯಗಳಲ್ಲಿ ಏನು ತೀರ್ಪಾಗಿದೆ ಎಂದು ತಿಳಿದುಕೊಂಡಿರುವುದಿಲ್ಲ. ನನಗೆ ಸ.ನಂ. 63, 63/1 ರಲ್ಲಿ ಜಮೀನಿದೆ. ನನ್ನ ಜಮೀನಿನ ಚೆಕ್ಕುಬಂದಿ ಹೇಳಲಾಗುವುದಿಲ್ಲ, ಏಕೆಂದರೆ ನಾನು ಓದು ಬರಹ ಮಾಡಿಲ್ಲ.

ಸ.ನಂ. 62 ರಲ್ಲಿ ಒಟ್ಟು ಎಷ್ಟು ಪೋಡುಗಳು ಆಗಿದೆ ಎಂದು ಗೊತ್ತಿಲ್ಲ. ದಾವಾ ಆಸ್ತಿಯು ಪ್ರತಿವಾದಿಯ ತಾತ ರಂಗಶೆಟ್ಟಿ ರವರಿಗೆ ಸರ್ಕಾರದಿಂದ ಮಂಜೂರಾಗಿರುವ ಆಸ್ತಿ ಎಂದರೆ ನನಗೆ ಗೊತ್ತಿಲ್ಲ. ಸದರಿ ರಂಗಶೆಟ್ಟಿರವರು ಮೃತಪಟ್ಟ ನಂತರ ದಾವಾ ಆಸ್ತಿಯ ಖಾತೆ ಪ್ರತಿವಾದಿಯ ಹೆಸರಿಗೆ ಖಾತೆಯಾಗಿದೆ ಎಂದರೆ ನನಗೆ ಗೊತ್ತಿಲ್ಲ. ಉಪ ವಿಭಾಗಾಧಿಕಾರಿಗಳ ನ್ಯಾಯಾಲಯ ಮತ್ತು ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ಪ್ರತಿವಾದಿಯ ಪರವಾಗಿ ಆದೇಶವಾಗಿದೆ ಎಂದರೆ ನನಗೆ ಗೊತ್ತಿಲ್ಲ. ಈ ದಾವೆಗೆ ಸಂಬಂಧಿಸಿದ ದಾಖಲೆಗಳನ್ನು ನಾನು ನೋಡಿಲ್ಲ. ದಾವಾ ಆಸ್ತಿಯಲ್ಲಿ ಮೊದಲು ರಂಗಶೆಟ್ಟಿ ನಂತರ ಅವರ ಮಗ, ಈಗ ಪ್ರತಿವಾದಿ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ವಾದಿಯು ದಾವಾ ಆಸ್ತಿಯಲ್ಲಿ ಸ್ವಾಧೀನದಲ್ಲಿರುವ ಬಗ್ಗೆ ದಾಖಲೆಯನ್ನು ನೋಡಿಲ್ಲ. ನಾನು ಒಂದೇ ಊರಿನವರಾದ ಕಾರಣ ವಾದಿಗೆ ಅನುಕೂಲವಾಗುವಂತೆ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

(ಶ್ರೀ. ದೀಪು ಎಂ.ಟಿ.)
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,
ಗುಂಡ್ಲುಪೇಟೆ